ವಯಸ್ಸಾದ ಅತ್ತೆ. ಮೈದುನ ರಮೇಶ ಹೆಂಡತಿ ಮಕ್ಕಳೊಡನೆ ವರ್ಷಗಳಿಂದ ದೂರದ ಅಮೆರಿಕೆಯಲ್ಲಿ ನೆಲೆಸಿದ್ದ. ನಾದಿನಿ ವಾಗ್ದೇವಿ ದೆಹಲಿಯ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಪ್ರಸೂತಿತಜ್ಞೆ. ಗಂಡ ಮಗಳೊಡನೆ ಇಪ್ಪತ್ತು ವರ್ಷಗಳಿಂದ ಅಲ್ಲಿಯೇ ವಾಸ. ತುಸುವೂ ಪುರುಸೊತ್ತಿಲ್ಲದ ಜೀವನ. ತಿಂಗಳಿಗೊಮ್ಮೆ ಫೋನ್ ಮಾಡಿ ತಾಯಿಯ ಯೋಗಕ್ಷೇಮ ಕೇಳಿಕೊಂಡರೆ ಅವಳ ಕರ್ತವ್ಯ ಮುಗಿದಂತೆ. ರಮೇಶ ಮಾತ್ರ ವಾರಕ್ಕೊಮ್ಮೆ ಫೋನ್ ಮಾಡುವುದಲ್ಲದೆ ಮೂರು ವರ್ಷಕ್ಕೊಮ್ಮೆ ರಜೆಯಲ್ಲಿ ಬಂದುಹೋಗುತ್ತಿದ್ದ. ವಾಣಿಯ ಒಬ್ಬನೇ ಮಗ ಆನಂದ ಈಚೆಗೆ ಲಗ್ನವಾಗಿ ಹೆಂಡತಿಯೊಂದಿಗೆ ಜರ್ಮನಿಗೆ ತೆರಳಿ ಅಲ್ಲಿ ಉದ್ಯೋಗ ಮಾಡುತ್ತಿದ್ದ. ವಾಣಿಗೀಗ ಅಲ್ಲಿ ಹೋಗಿ ಮಗನ ಸಂಸಾರ ನೋಡಿಬರುವ ಆಸೆ. ಮೊಮ್ಮಗುವಿನ ಆಗಮನದ ಸುದ್ದಿ ತಿಳಿದೊಡನೆ ಆಸೆ ಇನ್ನೂ ಹೆಚ್ಚಾಗಿತ್ತು. ಇದನ್ನು ಹರಿಯ ಮುಂದೆ ಆಡಿದ್ದಳು ಕೂಡ. ನಾವು ಜರ್ಮನಿಗೆ ಹೋದ್ರೆ ಅಮ್ಮನನ್ನು ಗಮನಿಸುವವರು ಯಾರು? ನಾವಲ್ಲಿದ್ದಾಗ ಅವರಿಗೇನಾದರೂ ಹೆಚ್ಚು ಕಮ್ಮಿಯಾದರೆ ಇಷ್ಟು ವರ್ಷಗಳು ನಾವು ನೋಡಿಕೊಂಡಿದ್ದೂ ವ್ಯರ್ಥವಾದಂತೆ. ಆದ್ದರಿಂದ ಈ ರೀತಿ ಯೋಚನೆ ಮಾಡುವುದೂ ಸರಿಯಲ್ಲ,'' ಎಂದುಬಿಟ್ಟಿದ್ದ. ''ಒಂದೆರಡು ತಿಂಗ್ಳು ನಿಮ್ಮ ತಮ್ಮನೋ ತಂಗಿಯೋ ಇಲ್ಲಿದ್ದು ಅತ್ತೆಯನ್ನು ನೋಡಿಕೊಳ್ಳಲಿ. ನಾವಿಬ್ರೂ ಆನಂದನ ಮನೇಗೆ ಹೋಗಿಬರೋಣ. ನಮಗೂ ಬದಲಾವಣೆ ಆದಂತಾಗುತ್ತೆ,'' ಎಂದು ವಾಣಿ ಹೇಳಿದ್ದಷ್ಟೇ ಅಲ್ಲದೆ ತಾನೇ ಮೈದುನ, ನಾದಿನಿಯ ಬಳಿ ಪ್ರಸ್ತಾಪ ಮಾಡಿದ್ದಳು.

''ಅತ್ತಿಗೆ, ಈ ದೇಶ್ದಲ್ಲಿ ಎರಡು ತಿಂಗ್ಳು ರಜಾ ಕೇಳಿದ್ರೆ ಕೆಲಸದಿಂದ ತೆಗೆದು ಮನೆಗೆ ಕಳಿಸ್ತಾರೆ. ಆಮೇಲೆ ನಾವೆಲ್ಲಾ ನಿಮ್ಮ ಮನೇಲಿ ಠಿಕಾಣಿ ಹಾಕ್ಬೇಕಾಗತ್ತೆ. ನೀವು ನಮ್ಮನ್ನ ಸಾಕ್ತೀರಾ?,'' ಎಂದು ಕೇಳಿದ್ದ. ವಾಗ್ದೇವಿ, ''ಅತ್ಗೆ, ನಾನೇನಾದ್ರು ಎರಡು ತಿಂಗ್ಳು ಆಸ್ಪತ್ರೆಗೆ ಹೋಗ್ದಿದ್ರೆ ನನ್ನ ಪೇಷೆಂಟುಗಳೆಲ್ಲಾ ನಿನ್ನ ಮನೆಗೆ ಮುತ್ತಿಗೆ ಹಾಕಿ ನಿನ್ನ ಮನೆ ಹೆರಿಗೆ ಆಸ್ಪತ್ರೆಯಾಗಿ ಮಾರ್ಪಾಡಾಗುತ್ತೆ. ನೀನದಕ್ಕೆ ಒಪ್ಪೊದಾದ್ರೆ ನಾ ಬಂದಿರೋಕ್ಕೆ ತಯಾರ್,'' ಎಂದು ಗಾಬರಿ ಪಡಿಸಿದ್ದಳು.

★★★

''ವಾಣೀ, ಹಬ್ಬ ಇನ್ನೇನು ಬಂದೇ ಬಿಡ್ತು. ಎಳ್ಳು ಸಕ್ರೆಅಚ್ಚು ಮಾಡಿದ್ದೀಯಾ? ಈ ಸಲ ಎಳ್ಳುಬೀರೋಕ್ಕೆ ಪ್ಲಾಸ್ಟಿಕ್ ಡಬ್ಬಗ್ಳೂ ಬೇಡ್ವೇ ಬೇಡ. ಲಕ್ಷಣವಾಗಿ ಸ್ಟೀಲ್ ಡಬ್ಬಗ್ಳೇ ತರಿಸಿಬಿಡು.'' ಮುಂದೆ ತಟ್ಟೆಯಲ್ಲಿದ್ದ ಹುಳಿಯನ್ನ ಕೈಯಿಂದ ಕೆದಕುತ್ತಾ ಸೊಸೆಗೆ ಕೂಗಿ ಕೇಳಿದರು. ''ಅತ್ತೆ, ಎಳ್ಳು ಸಕ್ರೆಅಚ್ಚು ಮಾಡೋದು ಸಂಕ್ರಾಂತಿ ಹಬ್ಬಕ್ಕೆ. ಅದು ಮುಗಿದು ಮೂರುತಿಂಗ್ಳಾಯ್ತು. ಈಗ ಬರೋದು ಯುಗಾದಿ ಹಬ್ಬ.''

"ಇಲ್ಲ ಕಣೇ. ನಾನು ಪಂಚಾಂಗ ನೋಡೇ ಹೇಳ್ತಿರೋದು. ಬರೋ ಭಾನ್ವಾರ ಎಳ್ಳು ಬೀರೋ ಹಬ್ಬ,'' ಎಂದರು ದೃಢವಾದ ಧ್ವನಿಯಲ್ಲಿ. ಇನ್ನು ವಾದಮಾಡಿ ಪ್ರಯೋಜನವಿಲ್ಲವೆಂಬುದನ್ನು ಮನಗಂಡ ವಾಣಿ ಬಾಯ್ಮುಚ್ಚಿಕೊಂಡಳು. ಅತ್ತೆ ಅಷ್ಟಕ್ಕೆ ಮುಕ್ತಾಯ ಮಾಡಿದ್ದರೆ!

"ಅದೇನೋ ಯುಗಾದಿ ಅಂದ್ಯಲ್ಲಾ. ಅದು ಪಟಾಕಿ ಹಚ್ಚೋ ಹಬ್ಬಾನಾ?''

"ಪಟಾಕಿ ಹಚ್ಚೋದು ದೀಪಾವಳೀಲಿ. ನಸುಕಿನಲ್ಲಿ ತೈಲಾಭ್ಯಂಜನ ಮಾಡ್ಕೊಂಡು, ಹೊಸ ಬಟ್ಟೆ ಹಾಕ್ಕೊಂಡು ಪಟಾಕಿ ಹಚ್ಚೋದು ಮರೆತುಬಿಟ್ರಾ?''

"ಹೋಗ್ಲಿ ಬಿಡಮ್ಮ. ಯಾವ್ದೋ ಒಂದು.'' ಎರಡೇ ನಿಮಿಷ. ಮತ್ತೆ ಮಾತು ಆರಂಭ.

"ಆನಂದು ಯಾವಾಗ ಬರ್ತಾನೆ?''